# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** ದಿನಾಂಕ: 07.07.2011

## ***ಪಾಲಿಕೆಯ ಸಹ ಕಂದಾಯ ಅಧಿಕಾರಿ (ಮಹಾಲಕ್ಷ್ಮಿಪುರಂ/ನಾಗಪುರ) ಹಾಗೂ ಕಂದಾಯ ಅಧಿಕಾರಿ (ಮಹಾಲಕ್ಷ್ಮಿಪುರಂ) ವಲಯ ಕಛೇರಿಗಳ ಸ್ಥಳಾಂತರ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಬರುವ ಸಹಾಯಕ ಕಂದಾಯ ಅಧಿಕಾರಿ (ಮಹಾಲಕ್ಷ್ಮಿಪುರಂ/ನಾಗಪುರ) ಹಾಗೂ ಕಂದಾಯ ಅಧಿಕಾರಿ (ಮಹಾಲಕ್ಷ್ಮಿಪುರಂ) ವಲಯ ಕಛೇರಿಗಳು ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು-20 ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈಗ ಈ ಕಛೇರಿಗಳಾದ ಸಹಾಯಕ ಕಂದಾಯ ಅಧಿಕಾರಿ (ಮಹಾಲಕ್ಷ್ಮಿಪುರ), ವಾರ್ಡ್ ನಂ.43, 44, 68, 74 ಮತ್ತು ಸಹಾಯಕ ಕಂದಾಯ ಅಧಿಕಾರಿ (ನಾಗಪುರ), ವಾರ್ಡ್ ನಂ.67, 75, 102 ಹಾಗೂ ಕಂದಾಯ ಅಧಿಕಾರಿ (ಮಹಾಲಕ್ಷ್ಮಿಪುರ) ವಲಯ ಕಛೇರಿಗಳನ್ನು ರಾಜಾಜಿನಗರ 2ನೇ ಬ್ಲಾಕ್, ಆರ್.ಟಿ.ಓ. ಕಾಂಪ್ಲೆಕ್ಸ್, ಬೆಂಗಳೂರು-560 010 ರಲ್ಲಿರುವ ಒಂದನೇ ಮಹಡಿಗೆ ಸ್ಥಳಾಂತರಿಸಲಾಗಿದೆ. ಸದರಿ ಕಛೇರಿಗಳು ದಿನಾಂಕ: 08.07.2011 ರಿಂದ ಕಾರ್ಯನಿರ್ವಹಿಸಲಿದೆ ಎಂದು ಜಂಟಿ ಆಯುಕ್ತರು (ಪಶ್ಚಿಮ) ವಲಯ ರವರು ತಿಳಿಸಿರುತ್ತಾರೆ. ಸಂಬಂಧಪಟ್ಟ ಸಾರ್ವಜನಿಕರು ಇನ್ನು ಮುಂದೆ ಸ್ಥಳಾಂತರಗೊಳ್ಳುವ ಕಛೇರಿಗಳನ್ನು ತಮ್ಮ ಕೆಲಸ ಕಾರ್ಯಗಳಿಗೆ ಸಂಪರ್ಕಿಸಲು ಕೋರಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**